ದಿನಾಂಕಃ 12/12/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎ.ಪಿ. ವಕೀಲರಿಂದಃ

ನಾನು ಪ್ರತಿವಾದಿಗಳ ಮೇಲೆ ನನ್ನ ತಂದೆಯ ಆಸ್ತಿಯಲ್ಲಿ ಹಿಸ್ಸೆ ಬರಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಸರ್ವೆ ನಂಬರ್ 55/1, 55/2, 55/3, 55/4 ರ ಮೇಲೆ ಸಲ್ಲಿಸಿರುತ್ತೇನೆ. ನಾನು ಒಟ್ಟು 3 ಎಕರೆ 30 ಗುಂಟೆಗೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನಗೆ ದಾವಾ ಆಸ್ತಿಯನ್ನು ಬಿಟ್ಟು ನನ್ನ ತಂದೆಗೆ ಬೇರೆ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಜೊತೆಯಲಿ ಒಟ್ಟು 6 ಜನ ಅಣ್ಣ-ತಮ್ಮಂದಿರು ಹುಟ್ಟಿದರು. ಮೊದಲನೇ ಕೃಷ್ಣೇಗೌಡ, ಎರಡನೇ ದೊಡ್ಡಣ್ಣ, ಮೂರನೇ ಪುಟ್ಟಸ್ವಾಮಿ, ನಾಲ್ಕನೇ ಬೀರೇಶ, ಐದನೇ ಸ್ವಾಮಿ, ಆರನೇ ನನ್ನ ತಂದೆ ದೇವರಾಜೇಗೌಡ. ನನ್ನ ತಂದೆಯು ನಾಲ್ಕನೇ ಅಥವಾ ಐದನೇಯವರಾಗಿದ್ದರು. ನನ್ನ ತಂದೆಯ ಜೊತೆಯಲ್ಲಿ ಹುಟ್ಟಿದವರು ಸರಿಯಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಸಹೋದರರು ವಿಭಾಗವನ್ನು ಮಾಡಿಕೊಂಡಿರುತ್ತಾರೆ. ನಮ್ಮ ತಾತಾನ ಆಸ್ತಿಯಲ್ಲಿ ನನ್ನ ತಂದೆಗೆ ಪಾಲು ಬಂದಿತ್ತು ಎಂದರೆ ಸರಿ.

ನನ್ನ ತಂದೆಗೆ ಕುಂಕುಮ ಹೊಸೂರು ಗ್ರಾಮದಲ್ಲಿ ಜಮೀನು ಬಂದಿದ್ದು ಅದನ್ನು ಮಾರಾಟ ಮಾಡಿ ಹೊಸಹಳ್ಳಿ ಗ್ರಾಮದಲ್ಲಿ ಜಮೀನು ತೆಗೆದುಕೊಂಡು ನನ್ನ ಚಿಕ್ಕಮ್ಮ ಆದ 1ನೇ ಪ್ರತಿವಾದಿಯ ಹೆಸರಿಗೆ ಆಸ್ತಿಯನ್ನು ಬರೆದಿರುತ್ತಾರೆ. ನಾನು ಈಗ ಹೇಳಿರುವ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಈ ರೀತಿ ನನ್ನ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ ನಾನು ನನ್ನ ವಾದ ಪತ್ರದಲ್ಲಿ ಎಲ್ಲೂ ಸಹ ಹೊಸಹಳ್ಳಿ ಎಂದುನಮೂದು ಮಾಡಿಲ್ಲ ಬೀಚನಹಳ್ಳಿ ಎಂದು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಹಳ್ಳಿಯ ಹೆಸರು ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಹೊಸಹಳ್ಳಿ ಗ್ರಾಮದಲ್ಲಿ ಇರುತ್ತದೆ.

ಕೃಷ್ಣೇಗೌಡ ನನಗೆ ನನ್ನ ತಂದೆಯ ಹಾಗೂ ನನ್ನ ತಾಯಿಯ ಕಡೆಯಿಂದ ದೊಡ್ಡಪ್ಪನಾಗಬೇಕು. ನಾವು ಮತ್ತು ಕೃಷ್ಣೇಗೌಡರವರು ಚೆನ್ನಾಗಿದ್ದೇವೆ. ಕೃಷ್ಣೇಗೌಡರ ಮನೆಗೆ ನಾವು ಹೋಗಿ ಬರುತ್ತೇವೆ ಎಂದರೆ ಸರಿ. ನನಗೆ ದಾವೆಯನ್ನು ಸಲ್ಲಿಸಲು ನನ್ನ ದೊಡ್ಡಪ್ಪಂದಿರು ಹೇಳಿರುತ್ತಾರೆ. ಕೃಷ್ಣೇಗೌಡರು ಅವರ ಅಣ್ಣ-ತಮ್ಮಂದಿರ ಮೇಲೆ ಒಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನನ್ನು ಪಕ್ಷಗಾರರಾಗಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನಗೆ ನೋಟೀಸಿ ಬಂದಿದ್ದರೂ ಸಹ ನಾನು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೃಷ್ಣೇಗೌಡರವರು ಯಾವಾ, ಯಾವಾ ಆಸ್ತಿಗಳ ಮೇಲೆ ದಾವೆಯನ್ನು ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಗಳನ್ನು ಕೃಷ್ಣೇಗೌಡರವರು ಸಲ್ಲಿಸಿರುವ ದಾವೆಯಲ್ಲಿ ಸೇರಿಸಲ್ಲ. ಆ ದಾವೆಯಲ್ಲಿಯೂ ಸಹ ಈ ದಾವೆಯ ದಾವಾ ಆಸ್ತಿಗಳನ್ನು ಸೇರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು 1991 ರಲ್ಲಿ ಹುಟ್ಟಿರುತ್ತೇನೆ. ನಾನು ಎಸ್.ಎಸ್.ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 1 ರಿಂದ 7 ನೇ ತರಗತಿಯವರೆಗೆ ವಾಸವಿ ಶಾಲೆ, ಹೊಳೆನರಸೀಪುರದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. 8 ನೇ ತರಗತಿಯಿಂದ 10 ನೇ ತರಗತಿಯವರೆಗೆ ಬೆಂಗಳೂರಿನಲ್ಲಿ ನನ್ನ ದೊಡ್ಡಪ್ಪನ ಮನೆಯಲ್ಲಿ ಓದಿರುತ್ತೇನೆ. ನಾನು ಹುಟ್ಟಿದ ತಕ್ಷಣ ನನ್ನ ತಾಯಿಯು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯು ನನ್ನ ತಾಯಿಯು ಮೃತಪಟ್ಟ 1 ವರ್ಷದ ನಂತರ 1 ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯನ್ನು ನನ್ನ ತಂದೆ ಮದುವೆಯಾದಾಗಾ ಬೆಂಗಳೂರಿನಲ್ಲಿ ಲೇಗೇಜ್ ಆಟೋವನ್ನು ಓಡಿಸುತ್ತಿದ್ದರು. ಆ ನಂತರ 1 ನೇ ಪ್ರತಿವಾದಿಯನ್ನು ಮದುವೆಯಾದ ನಂತರ ನನ್ನ ತಂದೆಯು ಕೆಲಸಕ್ಕೆ ಸೇರಿರುತ್ತಾರೆ.

ನನ್ನ ತಂದೆಯು ಯಾವ ವರ್ಷದಂದು ಪೋಲೀಸ್ ಕೆಲಸಕ್ಕೆ ಸೇರಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆಯು ಯಾವ ವರ್ಷದಂದು ಕೆಲಸಕ್ಕೆ ಸೇರಿರುತ್ತಾರೆ ಎಂದು ಅವರ ಎಸ್,ಆರ್. ಪುಸ್ತಕ ಅಥವಾ ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುವುದಿಲ್ಲ. ನನ್ನ ತಂದೆಯು ದಿನಾಂಕಃ 21.09.1992 ರಂದು ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಆಗಿ ಸೇರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯು ಪೋಲೀಸ್ ಆಗಿ ಸೇರಿಕೊಂಡ ದಿನದಿಂದ ಅವರು ಮರಣ ಹೊಂದುವರೆಗೆ ಬೆಂಗಳೂರಿನಲ್ಲಿಯೇ ಪೋಲೀಸ್ ಆಗಿ ಕರ್ತವ್ಯ ನಿರ್ವಹಿಸಿದರು ಎಂದರೆ ಸರಿ. ನಾನು ಸಹ ನನ್ನ ತಂದೆಯ ಮನೆಗೆ ಹೋಗಿ ಬರುತ್ತಿದ್ದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ದಾಖಲಾತಿಗಳನ್ನು ನನ್ನ ದೊಡಪ್ಪ ತೆಗೆದುಕೊಟ್ಟಿರುತ್ತಾರೆ.

ನನಗೆ ದಾಖಲಾತಿಗಳನ್ನು ಓದಲು ಬರುತ್ತದೆ. ನನ್ನ ದೊಡ್ಡಪ್ಪ ತೆಗೆದುಕೊಂಡ ದಾಖಲಾತಿಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಗಳು ಎಲ್ಲಾವು 1 ನೇ ಪ್ರತಿವಾದಿಗೆ ದಿನಾಂಕಃ 10.07.1992 ರಂದು ಕ್ರಯಕ್ಕೆ ಬಂದಿರುವ ಆಸ್ತಿಗಳಾಗಿರುತ್ತದೆ ಎಂದರೆ ಸರಿಯಲ್ಲ . 1992 ರಲ್ಲಿ 1 ನೇ ಪ್ರತಿವಾದಿಗೆ ಕ್ರಯದ ಕ್ರಯಪತ್ರವಾದಾಗಾ ನನ್ನ ತಂದೆಯು ಇನ್ನೂ ಕೆಲಸಕ್ಕೆ ಸೇರಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ನನ್ನ ತಾತಾನ ಆಸ್ತಿಯನ್ನು ಮಾರಾಟ ಮಾಡಿ ಈ ಆಸ್ತಿಯನ್ನು ತೆಗೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯು ನನ್ನ ತಾತಾನ ಆಸ್ತಿಯನ್ನು ಮಾರಾಟ ಮಾಡಿರುವ ಕ್ರಯಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ . ನನ್ನ ತಂದೆಯು ನನ್ನ ತಾತಾನ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಮತ್ತು ನನ್ನ ತಾತಾನ ಆಸ್ತಿಯು ನನ್ನ ತಂದೆ ಹಾಗೂ ಅವರ ಸಹೋದರರ ನಡುವೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಅಷ್ಟು ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು 1 ನೇ ಪ್ರತಿವಾದಿಯನ್ನು ಮದುವೆಯಾದಾಗಾ ಅವರಿಗೆ ಅಷ್ಟು ಸಾಮಾಜಿಕ ಪರಿಜ್ಞಾನ ಇಲ್ಲದೇ ಇರುವುದರಿಂದ 1 ನೇ ಪ್ರತಿವಾದಿಯ ಹೆಸರಿಗೆ ಅವರ ತಂದೆಯ ಮನೆಯವರು ದಾವಾ ಆಸ್ತಿಗಳನ್ನು ಕ್ರಯಕ್ಕೆ ತೆಗೆದುಕೊಟ್ಟಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯ ಮನೆಗೆ ನಾನು ಹೋಗಿ ನೋಡಿರುವುದಿಲ್ಲ. 1 ನೇ ಪ್ರತಿವಾದಿಯ ತಂದೆಯ ಮನೆಗೆ ಎಷ್ಟು ಜಮೀನು, ಎಷ್ಟು ಎಕರೆ ತೋಟ ಇದೆ ಎಂದು ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಪ್ರತಿವಾದಿಗಳಿಗೆ ನಾನು ಕಿರುಕುಳ

ಮತ್ತು ತೊಂದರೆ ನೀಡಲು ಅವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ಮೃತಪಟ್ಟು 4-5 ವರ್ಷ ಆಗಿದೆ. ನನ್ನ ತಂದೆ ಮೃತಪಡುವ ಸಮಯದಲ್ಲಿ ಬೆಳಂದೂರಿನಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ನನ್ನ ತಂದೆಗೆ ಹೃದಯ ಅಪಘಾತವಾಗಿ ಮೃತಪಟ್ಟಿರುತ್ತಾರೆ ಎಂದು ಹೇಳಿರುತ್ತಾರೆ.

ನನ್ನ ತಂದೆಯು ಕರ್ತವ್ಯದಲ್ಲಿ ಇದ್ದಾಗಾ ಸುಮಾರು ಬಾರಿ ಅಮಾನತು ಆಗಿರುತ್ತಾರೆ. ನನ್ನ ತಂದೆ ಮಧ್ಯಪಾನವನ್ನು ಸೇವಿಸಿ, ಮೇಲಾಧಿಕಾರಿಗಳ ಜೊತೆ ಜಗಳ ಮಾಡಿಕೊಂಡು ಅಮಾನತು ಆಗಿರುತ್ತಾರೆ. 1 ಬಾರಿ ಅಮಾನತು ಆದರೆ ಸುಮಾರು 5-6 ತಿಂಗಳುಗಳ ಕಾಲ ಕರ್ತವಕ್ಕೆ ಹೋಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ 1 ನೇ ಪ್ರತಿವಾದಿಯ ಜೊತೆ ಆಗಾಗ್ಗೆ ಗಲಾಟೆ ಮಾಡಿಕೊಂಡು ಮನೆಯಲ್ಲಿ ಇರುತ್ತಿದ್ದರು. ನಾನು ನಮ್ಮ ತಂದೆಯ ಕರ್ತವ್ಯದಲ್ಲಿ ಇದ್ದಾಗಾ ಅವರ ಠಾಣೆಗೆ ಸುಮಾರು 7-8 ಬಾರಿ ಹೋಗಿರುತ್ತೇನೆ. ನನ್ನ ತಂದೆಗೆ ನೌಕರಿಗೆ ಸೇರುವ ಮುನ್ನ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳು ಕ್ರಯದ ಮೂಲಕ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯು ನನ್ನ ತಾತಾನ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಯ ಹೆಸರಿಗೆ ಕ್ರಯಕ್ಕೆ ತೆಗೆದುಕೊಟ್ಟಿರುತ್ತಾರೆ ನನ್ನ ತಾತಾನ ಆಸ್ತಿಯಲ್ಲಿ ಹೊಸಹಳ್ಳಿಯಲ್ಲಿ ಇರುವ ತೋಟವನ್ನು ನನ್ನ ತಂದೆಗೆ ಅನುಭೋಗ ನೀಡಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ